ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 16ನೇ ಮಾರ್ಚ್, 2020

ಅಕೇಶಿಯಾ ನೆಡುತೋಪಿನಲ್ಲಿ ಅಕ್ರಮ ಕಡಿತ ಮಾಡಿ ಹಣ ದುರುಪಯೋಗ ಮಾಡಿರುವ ಕುರಿತು

ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

953 (1077) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೆನರಾ ವೃತ್ತದ ಹಳಿಯಾಳ ವಿಭಾಗದ ವ್ಯಾಪ್ತಿಗೆ ಬರುವ ದಾಂಡೇಲಿ ಅರಣ್ಯ ವಲಯದ ಉಸೋಡಾ ಅರಣ್ಯದಲ್ಲಿ 2017ರಲ್ಲಿ 30ಹೆಕ್ಟೇರ್ ಪ್ರದೇಶದಲ್ಲಿ ನಡೆದಿರುವ ಅಕೇಶೀಯಾ ನೆಡುತೋಪಿನಲ್ಲಿ ಭಾರೀ ಪ್ರಮಾಣದ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಸಂಬಂಧಿಸಿದವರ ಮೇಲೆ ಯಾವ ಕ್ರಮಕೈಗೊಂಡಿದೆ; (ವಿವರ ನೀಡುವುದು)

(ಆ) ಸದರಿ ಅರಣ್ಯ ಪ್ರದೇಶದಲ್ಲಿ ಈ ಹಿಂದೆ ಬೆಳೆಸಿರುವ ಅಕೇಶಿಯಾ ಮರಗಳನ್ನು ಕಟಾವು ಮಾಡಿ ಅದೇ ಸ್ಥಳದಲ್ಲಿ ಪುನಃ ಅಕೇಶಿಯಾ ಸಸಿಗಳನ್ನು ಬೆಳೆಸಬೇಕೆಂದಿದ್ದರೂ ಸದರಿ ಆದೇಶವನ್ನು ಗಾಳಿಗೆ ತೂರಿ 30 ಹೆಕ್ಟರ್ ಪ್ರದೇಶದಲ್ಲಿ 5% ರಷ್ಟು ಪ್ರದೇಶದಲ್ಲಿನ ಮರಗಳನ್ನು ಕಡಿದು ಉಳಿದ 25% ಪ್ರದೇಶದ ಕಟಾವು ಕಾರ್ಯ ಬಾಕಿ ಉಳಿಸಿ ಎಲ್ಲಾ ಮರಗಳನ್ನು ಕಡಿಯಲಾಗಿದೆ ಎಂದು ಹೇಳಿ ಗುತ್ತಿಗೆದಾರರಿಗೆ ಸರ್ಕಾರದಿಂದ ಹಣ ಪಾವತಿಸಿ ಅವ್ಯವಹಾರ ಮಾಡಿರುವವರು ಯಾರು ಯಾರು; ಈ ಬಗ್ಗೆ ಲೋಕಾಯುಕ್ತರಿಂದ ಸೂಕ್ತ ತನಿಖೆ ಮಾಡಿಸಲಾಗುವುದೇ? (ಸದರಿ ಅಕೇಶಿಯಾ ನಡುತೋಪಿನ ಸವಿಸ್ತಾರ ವರದಿ ನೀಡುವುದು)